C.C. No.- 582/2017
CW-20/ PW-12

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ

ಸಾಕ್ಷಿಯನ್ನು ದಿನಾಂಕ- 14.10.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಭಾಷಾ |
| ತಂದೆ / ಗಂಡನ ಹೆಸರು- | ಬಾಬುಸಾಬ್ |
| ವಯಸ್ಸು- | 38 ವರ್ಷಗಳು |
| ಉದ್ಯೋಗ- | ವ್ಯಾಪಾರ |
| ವಾಸಸ್ಥಳ- | ಗಂಗಾವತಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನನಗೆ ಚಾಸಾ- 1 ರಿಂದ 19, 21 ಮತ್ತು 22 ಗೊತ್ತಿಲ್ಲ. ಆರೋಪಿತನ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸ.ಸ.ಅ. ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲು- ಸ. ಸ. ಅ. ಅವರಿಂದ-

2. ಆರೋಪಿ ನನಗೆ ಫೋನ್ ಮಾಡಿ ತನ್ನ ಮಿಲ್ ನಲ್ಲಿ ಸಂಗ್ರಹಿಸಿದ್ದ ಅಕ್ಕಿಗಳನ್ನು ಬೇರೆ ಗೋಡೌನಗೆ ತೆಗೆದುಕೊಂಡು ಹೋಗಲು ಕೆಲಸವಿದೆ ಬಾ ಅಂತಾ ಕರೆದಿದ್ದ ಎಂದರೆ ಸರಿಯಲ್ಲ. ಆರೋಪಿ ಪಡಿತರ ಅಕ್ಕಿ ಮತ್ತು ಗೋಧಿಯನ್ನು ಕಡಿಮೆ ಬೆಲೆಗೆ ಖರೀದಿಸಿ ನಂತರ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾನೆ ಅಂತಾ ಚಾಸಾ- 1 ರವರು ದಾಳಿ ಮಾಡಿ ಆರೋಪಿಯ ಗೋಡೌನಲ್ಲಿದ್ದ ಒಟ್ಟು 244 ಚೀಲಗಳಲ್ಲಿ ತಲಾ 50 ಕೆ.ಜಿಯಂತೆ ಅಕ್ಕಿ ಮತ್ತು 127 ಚೀಲಗಳಲ್ಲಿ ತಲಾ 50 ಕೆ.ಜಿಯಂತೆ

ಗೋಧಿಯನ್ನು ತನ್ನ ಗೋಡೌನನಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ:19-09-2016 ರಂದು ಈಗ ಓದಿ ಹೇಳಿದಂತೆ ನಾನು ........ ಈ ಮೂಲಕ ಹೇಳಿಕೆ ನೀಡಿರುತ್ತೇನೆ ಅಂತಾ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ನನಗೆ ನಿಪಿ-10 ರಲ್ಲಿ ಬರೆದ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲು- ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ